ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 5, November - December 2024, Pp. 140-143
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕುವೆಂಪು ಅವರ ಆಯ್ದ ಕಾವ್ಯಗಳಲ್ಲಿ 'ಮಗು' ಪರಿಕಲ್ಪನೆ

**ಡಾ.ಲತಾ ಆರ್**

ಕನ್ನಡ ಅತಿಥಿ ಉಪನ್ಯಾಸಕರು, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

***Abstract:***

*'ಶಬ್ದಾರ್ಥೌ ಸಹಿತೌ ಕಾವ್ಯಂ' ಎಂಬ ಭಾಮಹನ ಉಕ್ತಿಯಂತೆ ಕಾವ್ಯ ಎಂಬುದು ಶಬ್ದ ಮತ್ತು ಅರ್ಥ ಎರಡನ್ನು ಹೊಂದಿರುತ್ತದೆ. ಹೊಸಗನ್ನಡದಲ್ಲಿ ಬಹು ಸಮೃದ್ಧವಾಗಿ ಬೆಳೆ ಬಂದದ್ದು ಮೊದಲು ಕಾವ್ಯದ ಕ್ಷೇತ್ರದಲ್ಲಿ ಮತ್ತು ಸಣ್ಣಕಥೆಗಳ ಕ್ಷೇತ್ರದಲ್ಲಿ1 ಕಾವ್ಯವೆಂಬುದು ಬ್ರಹ್ಮಾಂಡವನ್ನು ಕೈಯಲ್ಲಿ ಹಿಡಿದ ಹಾಗೆ. ಪದ ಕಿರಿದಾದರೂ ಅದರ ಅರ್ಥ ಬೃಹದ್ದಾಗಿರುತ್ತದೆ. ಕಾವ್ಯವು ಲಯದ, ಜೊತೆಗೆ ನೀತಿಸಾರವನ್ನು ಹೇಳುತ್ತದೆ. ಪ್ರಸ್ತುತ ಲೇಖನದಲ್ಲಿ ಕುವೆಂಪು ಅವರ ಕಾವ್ಯಗಳಲ್ಲಿ 'ಮಗು'ವಿನ ಪರಿಕಲ್ಪನೆ ಕುರಿತು ಚರ್ಚಿಸಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ಕುವೆಂಪು, ಕಾವ್ಯ, ಮಗು, ನಿಸರ್ಗ.*

**ಪೀಠಿಕೆ**

ಕುವೆಂಪು ಅವರು ಬರೆಯದ ಕ್ಷೇತ್ರಗಳೇ ಇಲ್ಲ ಅವರು ಎಲ್ಲಾ ವಿಷಯಗಳನ್ನು ಅರಿತ ಮಹಾಜ್ಞಾನಿ. ನಿಸರ್ಗ, ಕೀರ್ತಿ, ಕರುಣೆ, ತಾಯಿ, ಸ್ಥಳೀಯ ಪ್ರತಿಭೆ ಇತ್ಯಾದಿ ಎಲ್ಲಾ ವಿಷಯಗಳಲ್ಲೂ ಕವಿತೆಯನ್ನು ರಚಿಸಿದ್ದಾರೆ. ಅವರು ತಮ್ಮನ್ನೇ ಸಹ್ಯಾದ್ರಿಯ ಶಿಶು ಎಂದು ಹೇಳಿಕೊಂಡಿದ್ದಾರೆ. ಎಷ್ಟೇ ದೊಡ್ಡವರಾದರೂ ಮಗುವಿನ ಮನಸ್ಸನ್ನು ಕಾಪಾಡಿಕೊಳ್ಳುವುದು ಕಷ್ಟ. ಆದರೆ ಆ ವ್ಯಕ್ತಿತ್ವವನ್ನು ಎಂದಿಗೂ ಬಿಟ್ಟುಕೊಡಲಿಲ್ಲ. ರಾಷ್ಟ್ರಕವಿ ಆದರೂ ಕವಿಯ ಮನಸ್ಸು ಮಗುವಿನ ರೀತಿಯಲ್ಲಿಯೇ ಇತ್ತು.

***"ಸ್ವಾಗತ ನಿನಗೆಲೆ ಕಂದಯ್ಯಾ***
***ನಮ್ಮೆದೆ ಬಾನಿನ ಚಂದಯ್ಯಾ***
***ನಮ್ಮಾತ್ಮದ ಅಮೃತತ್ವದ ಬಿಂದುವೆ***
***ನಮ್ಮಿಬ್ಬರ ಚಿರಸುಖರಸ ಸಿಂಧುವೆ***
***ಆ ಸಿಂಧುವನ್ನಾಕಿಪ ಪೂರ್ಣೇಂದುವೆ***
***ಸ್ವಾಗತ ನಿನಗೊ ಕಂದಯ್ಯ***
***ನಮ್ಮಾತ್ಮದ ಕಲ್ಪಾಂತರ ಬಂಧುವೆ***
***ಮಂಗಳ ನಿನಗೋ ಜೀವಾನಂದವೆ***
***ನಮ್ಮೆದೆ ಬಾನಿನ ಚಂದಯ್ಯ"[2]***

ಈ ಕವಿತೆಯಲ್ಲಿ ಕುವೆಂಪು ಅವರು ಕಂದನನ್ನು ಬಾನಿನ ಚಂದ್ರನಿಗೆ ಹೋಲಿಸಿದ್ದಾರೆ. ನಮ್ಮ ಹೃದಯವು ಆಗಸವಾದರೆ ಕಂದನೇ ಚಂದ್ರನೆಂದು ಹೇಳಿದ್ದಾರೆ. ಚಂದ್ರ ಹೇಗೆ ಕತ್ತಲೆಯಲ್ಲಿ ಬೆಳಕನ್ನು ನೀಡುತ್ತಾನೋ ಮಗುವು ಕೂಡ ಹಾಗೆಯೇ ನೊಂದಿರುವ ಮನಗಳಿಗೆ ತಂಪನೆರೆಯುವ ಚಂದ್ರನ ಹಾಗೇ ಎಂಬುದಾಗಿದೆ. ಮಗುವೆಂದರೆ ನಮ್ಮ ಜೀವನವನ್ನು ಮುನ್ನಡೆಸಿಕೊಂಡು ಹೋಗುವ ಅಮೃತದ ಬಿಂದು. ತಂದೆ ತಾಯಿಗೆ ಪ್ರತಿದಿನ ಮನಸ್ಸು ಸಂತೋಷ ಪಡೆಸುವ ನಗೆಯ ಚಿಲುಮೆ. ಇಂತಹ ಕಂದನಿಗೆ ಇಲ್ಲಿ ಸ್ವಾಗತವನ್ನು ಕವಿ ಕೋರಿದ್ದಾರೆ. ಮಗು ಎಂದರೆ ಈ ನಮ್ಮ ಆತ್ಮಗಳಿಗೆ,

***Please cite this article as:*** ಲತಾ ಆರ್. (2024). ಕುವೆಂಪು ಅವರ ಆಯ್ದ ಕಾವ್ಯಗಳಲ್ಲಿ 'ಮಗು' ಪರಿಕಲ್ಪನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(5), 140–143

ಈ ಜನ್ಮಕ್ಕೆ ಮಾತ್ರ ಬಂಧುವಾಗಿರದೆ ಜನ್ಮ ಜನ್ಮಗಳಿಗೂ ಜೀವಾನಂದ ನೀಡುವ ಬೆಳಕು ಎಂಬುದು ಕವಿಯ ಅಭಿಪ್ರಾಯ.

ನಮ್ಮ ಮನಸ್ಸಿನ ಸಂತೋಷಕ್ಕೆ ನೀನೆ ಸಾಕ್ಷಿ. ಪೂರ್ಣ ಸೂರ್ಯ ಬೆಳಗುತ್ತಾನೋ ಅದೇ ರೀತಿ ನೀನು ಕಂದ ಎಂದು ಈ ಭೂಮಿಗೆ ತನ್ನ ಪ್ರಪಂಚಕ್ಕೆ ಇಲ್ಲಿ ಮಗುವಿಗೆ ಸ್ವಾಗತ ಕೋರುವ ಮೂಲಕ ಮಗುವಿನ ಮಹತ್ವವನ್ನು ಇಲ್ಲಿ ಬಣ್ಣಿಸಿದ್ದಾರೆ.

*ಕುಣಿಯುತ ಬಾ, ಕುಣಿಯುತ ಬಾ*
*ಕುಣಿಯುತ ಬಾ ಕಂದಯ್ಯ*
*ತಂದೆ ತಾಯಿಯರ ಕಲೆಯ ಕರ್ಣನವಿಲ*
*ಕುಣಿಸಿ ತಣಿಸಿ ಬಾ ಕಂದಯ್ಯ*
*ಮಲೆಯ ಅಡವಿಯಲ್ಲಿ ಚಿಮ್ಮಿ ಜಿಂಕೆಮರಿ*
*ತನ್ನಮ್ಮಾನೆಡೆಗೆ ನೆಗೆವಂತೆ ಬಾ*
*ಬೆಟ್ಟನೆತ್ತಿಯಿಂದುರುಳಿ ಕಲ್ಗಳಲಿ*
*ಸುತ್ತಿ ಸುಳಿವ ತೊರೆಯಂತೆ ಬಾ*[3]

ಈ ಕವಿತೆಯಲ್ಲಿ ಕುವೆಂಪು ಅವರು ಮಗುವಿಗೆ ಸಂತೋಷವಾಗಿ ಕುಣಿಯುತ ಬಾ ಎಂದು ಹೇಳುತ್ತಾ ಮಗುವಿನ ಆಟದ ವರ್ಣನೆ ಮಾಡುತ್ತಾ ನಿಸರ್ಗ ಮತ್ತು ಮಗುವಿನ ನಡೆಯು ಹೇಗಿರಬೇಕು ಎಂದು ಹೇಳಿದ್ದಾರೆ. ಕವಿ ತಮ್ಮ ಬಾಲ್ಯವನ್ನು ಮಲೆನಾಡಿನ ನಿಸರ್ಗದ ಮಧ್ಯೆ ಕಳೆದವರು ಆದ್ದರಿಂದ ಮಲೆನಾಡಿನ ನಿಸರ್ಗದ ಪ್ರೇರಣೆಯನ್ನು ಈ ಸಾಲುಗಳಲ್ಲಿ ಬೆಟ್ಟಗಳ ನಡುವಿನ ಅಡವಿಯಲ್ಲಿ ಜಿಂಕೆಮರಿಯು ತನ್ನ ಅಮ್ಮನೆಡೆಗೆ ಸ್ವಚ್ಛಂದವಾಗಿ ನಿರ್ಭೀತವಾಗಿ ನೆಗೆಯುವ ಹಾಗೇ ನೆಗೆದು ಬಾ ಮಗುವೇ ಎಂದು ಹೇಳುತ್ತಾ ಮಳೆಯ ಹನಿಯು ಬೆಟ್ಟಗಳ ನಡುವೆ ಹರಿದು ಜರಿಯಾಗಿ ಅರಿಯುವಾಗ ಅಷ್ಟು ಸೊಗಸಾಗಿ ಭುವಿಗೆ ಇಳಿಯುತ್ತದೆಯೋ ಅದೇ ರೀತಿ ಇಳಿದು ಬಾ ಕಂದ ಎಂದು ಮಗುವನ್ನು ಕರೆಯುತ್ತಾರೆ. ಮುಂದುವರೆದು ಹಾಗೇ ನಿನ್ನ ನಡೆಯು ಹೇಗಿರಬೇಕು ಎಂದು ಕೆಲವು ಉದಾಹರಣೆಯ ಮೂಲಕ ಹೇಳುತ್ತಾರೆ. ತಂಪಾದ ತೋಟದಲ್ಲಿ ಎಲೆಗಳು ಎಷ್ಟು ನವಿರಾಗಿ ಹಾರಾಡುತ್ತೋ ಆ ರೀತಿಯಲ್ಲಿ, ಹಕ್ಕಿಯ ಕೊರಳ ಇಂಪಿನಂತೆ ನಮ್ಮ ಬಾಳಿಗೆ ಮುದವನ್ನು ನೀಡು ಕಂದ ಹೇಳುತ್ತಾ ನಮ್ಮ ಮುಂದೆ ನೀನು ಮಹಾನ್ ವ್ಯಕ್ತಿಯಾಗಿ ಬೆಳೆಯಬೇಕೆಂಬ ಹಂಬಲವನ್ನು ಇವರ ಈ ಕವಿತೆಯಲ್ಲಿ ಕಾಣಬಹುದಾಗಿದೆ.

*"ದೇವರ ಹರಕೆಯು ಬಾನಿಂ ಭೂಮಿಗೆ*
*ನೀಡಿದ ಕೈ ಈ ಕಂದನ ಮೈ*
*ಈ ಮುದ್ದೀ ಸೊಗಸೀ ಪೆಂಪಿಪಂ*
*ಮಾಡಬಲ್ಲುದೇನನ್ಯರ ಕೈ"*[4]

ಈ ಕವಿತೆಯಲ್ಲಿ ಕುವೆಂಪು ಅವರು ಮಗುವನ್ನು ದೈವತ್ವಕ್ಕೆ ಹೋಲಿಸಿದ್ದಾರೆ. ಮಗುವಿನಲ್ಲಿ ನಿಸರ್ಗ ಮತ್ತು ದೇವರನ್ನು ಕಂಡಿದ್ದಾರೆ. ಕಂದ ನೀನು ನನ್ನ ಬಾಳಲ್ಲಿ ಸುಮ್ಮನೆ ಬಂದಿಲ್ಲ. ನೀ ನನಗೆ ದೈವ ಕೊಟ್ಟ ವರ ನೀನು. ನಿನ್ನ ಸೊಗಸನ್ನು ಯಾರು ಮೀರಿಸಲು ಸಾಧ್ಯವಿಲ್ಲವೆಂದು ಹೇಳುತ್ತಾ, ನಿನ್ನ ಕಣ್ಣುಗಳು ಸರೋವರವನ್ನು ಹೋಲುತ್ತಿವೆ, ಆಕಾಶದ ಶಿವನನ್ನೇ ಪ್ರತಿಫಲಿಸುತ್ತಿವೆ. ಸಾಗರಗಳು ಹೇಗೆ ಸಂಚರಿಸುತ್ತಿವೆಯೋ ಅದರಂತೆ ನಿನ್ನ ಕಣ್ಣುಗಳು ಚಲಿಸುತ್ತವೆ ಎಂದು ವರ್ಣಿಸಿದ್ದಾರೆ.

ಕಂದನ ಕಾಲನ್ನು ಹೋಲಿಸುತ್ತಾ ನಿನ್ನ ಪಾದಗಳಿವೆಯೆಲ್ಲಾ ಅದು ಮೇರು ಪರ್ವತವೇರಿದ ಕಾಲು. ಗಂಗೆಯಲ್ಲಿ ಮಿಂದ ಕಾಲು. ಚಿನ್ನದ ಹುಡಿಯಲಿ ಹಾಲುಕೆನೆಯು ಅದ್ದಿದ್ದರೆ ಹೇಗೆ ಕಾಣಿಸುತ್ತದೆ ಅದೇ ರೀತಿ ನಿನ್ನ ಕಾಲುಗಳು ಸಿಂಗಾರಗೊಂಡಿವೆ ಎಂದು ವರ್ಣಿಸಿದ್ದಾರೆ. ನಿನ್ನ ಚಂದದ ಮೊಗವು ಬ್ರಹ್ಮಾಂಡಕ್ಕೆ ಕನ್ನಡಿ ಹಿಡಿದ ಹಾಗೇ ಇದೆ. ನಿನ್ನ ವದನದಲ್ಲಿ ಸೂರ್ಯಚಂದ್ರರ ಕಳೆಯಿದೆ. ಜಗತ್ತಿನ ಸೃಷ್ಟಿಯಲ್ಲಿ ಪರ್ವತ, ಕಾನನ, ಖಗಮೃಗ ಏನೇನು ಇದೆಯೋ ಅದೆಲ್ಲ ಕಂದ ನಿನ್ನ ಮೊಗದಲ್ಲಿದೆ ಎಂದು ವರ್ಣಿಸಿದ್ದಾರೆ. ಈ ಕವಿತೆಯಲ್ಲಿ ಒಂದು ಪುಟ್ಟ ಮಗುವನ್ನು ಬೃಹ್ಮಾಂಡದ ರೀತಿಯಲ್ಲಿ ವರ್ಣಿಸಿದ್ದಾರೆ.

*“ಹಸುರಿನುಯ್ಯಾಲೆಯಲಿ*
*ಬಿಸಿಲು ತೂಗಾಡುತಿದೆ*
*ಚುಕ್ಕಿಯುದ್ಯಾನದಲಿ*
*ಹಕ್ಕಿ ಹಾರಾಡುತಿದೆ*
*ಒಡಲವೀಣೆಯ ನಡುವೆ*
*ನುಡಿಯಿಲ್ಲದಿಂಚರಕೆ*
*ಮೊದಲ ತೊದಲಿನ ನುಡಿಯ*
*ಕೆಂಪು ತೆರೆಯುತಿದೆ”*

ಮಗುವಿನ ನಗುವನ್ನು ವರ್ಣಿಸುತ್ತಾ ಮಗುವನ್ನು ನಿಸರ್ಗಕ್ಕೆ ಹೋಲಿಸಿದ್ದಾರೆ. ಹಸುರಿನ ಉಯ್ಯಾಲೆಯಲ್ಲಿ ಬಿಸಿಲು ತೂಗಾಡುವಾಗ ಎಷ್ಟು ಹೊಳಪಿರುತ್ತದೋ, ಅಂದರೆ ಮುಂಜಾನೆಯ ಎಳೆ ಬಿಸಿಲಿನಲ್ಲಿ ಹಸಿರು ಎಷ್ಟು ಚೆಂದವೋ ಕಂದನು ಕೂಡ ಹಾಗೇ ಆಕಾಶದಲ್ಲಿ ಹಕ್ಕಿಯು ಎಷ್ಟು ಚಂದವಾಗಿರುತ್ತದೋ ಆ ರೀತಿಯಲ್ಲಿ ನಿನ್ನ ಈ ಮುದ್ದಿನ ನಗುವು, ಎಷ್ಟೋ ಲೋಕವನ್ನು ಮರೆಸುತ್ತದೆ. ನಿನ್ನ ತೊದಲ ನುಡಿಯು ಇಂಪಾದ ಸಂಗೀತವನ್ನೆ ಮರೆಸುತ್ತದೆ ಎಂದು ವರ್ಣಿಸುತ್ತಾರೆ.

*“ಲೋಕದ ಪಾರವಾರದ ತೀರದಿ*
*ಸೇರಿದ ಶಿಶುಗಳ ಸಮ್ಮೇಲ*
*ಅಂತವೆ ಇಲ್ಲದ ನೀಲಗಗನ ತಲ*
*ನಿಂತಿದೆ ನೆತ್ತಿಯ ಮೇಲೆ ಅಚಂಚಲ*
*ನೊರೆ ನೊರೆ ಎದ್ದ ಸುನೀಲಾಂಬುಧಿ ಜಲ*
*ನರ್ತಿಸಿ ಮೊರೆವುದು ದಿನವೆಲ್ಲ.*
*ದಡದೊಳದೇನು ಮಹಾಕೋಲಾಹಲ*
*ಸೇರಿದೆ ಶಿಶುಗಳ ಸಮ್ಮೇಲ”*

ಕಂದನ ಲೀಲೆಯನ್ನು ವರ್ಣಿಸುತ್ತಾ, ಕಂದನ ಲೀಲೆಗಳಲ್ಲಿ ಪದಗಳಲ್ಲಿ ಬಂಧಿಸಿಡಲು ಸಾಧ್ಯವಿಲ್ಲ. ಬಣ್ಣಿಸುವುದಾದರೆ ಯಾವುದೇ ವರ್ಣನೆಯಿದ್ದರೂ ಸಾಲದು ಎಂಬುದು ಈ ಸಾಲುಗಳಿಂದ ತಿಳಿಯುತ್ತದೆ. ಈ ಕವಿತೆಯಲ್ಲಿ ಕವಿ ಕಂದಮ್ಮಗಳ ಸಮ್ಮೇಲನವನ್ನು ಸೇರಿಸುತ್ತಾ ಆ ರೀತಿ ಸಮ್ಮೇಲನವಾದರೆ ಯಾವ ರೀತಿ ಸೋಜಿಗವಾಗಿರುತ್ತದೆ ಎಂಬುದಾಗಿ ವರ್ಣಿಸಿದ್ದಾರೆ. ಕಂದಮ್ಮ ಸಮ್ಮೇಲನ ಇದೆಯಲ್ಲಾ ಈ ಆಕಾಶ ಸಮುದ್ರವೇ ನರ್ತಿಸುತ್ತಿದೆ. ಸಮುದ್ರದ ದಡದಲ್ಲಿ ಯಾವ ರೀತಿ ಅಲೆಗಳ ಕೋಲಾಹಲ ಇರುತ್ತದೆ, ಅದೇ ರೀತಿಯಲ್ಲಿ ಆ ಕಂದಮ್ಮಗಳ ತೊದಲ ನುಡಿಯು ಮೊರೆಯುತ್ತವೆ.

ಕಂದಮ್ಮಗಳಿಗೆ ಮನೆಯನ್ನು ಕಟ್ಟಲು ದುಡ್ಡೇ ಬೇಕಿಲ್ಲ ಆ ಮರಳಲ್ಲೇ ಮನೆಯನ್ನು ಕಟ್ಟಿ ಕಪ್ಪೆ ಚಿಪ್ಪುಗಳಿಂದಲೆ ಮನೆಯನ್ನು ಅಲಂಕರಿಸುತ್ತಾರೆ, ಕಾಗದದಲ್ಲಿಯೇ ದೋಣಿಯ ಮಾಡುವರು. ತರಗತಿಯನ್ನು ತೆಪ್ಪಗಳಾಗಿ ಪರಿವರ್ತಿಸುವರು ಲೋಕದಲ್ಲಿ ಯಾವುದೇ ಕಷ್ಟಗಳನ್ನು ತಮ್ಮ ತಲೆಗೆ ತೆಗೆದುಕೊಳ್ಳದೇ ಎಲ್ಲರೂ ಒಂದಾಗಿ ಕುಣಿಯುವರು. ಕಡಲಲ್ಲಿ ಈಜಲು ಬರದಿದ್ದರೂ ಕೂತಲ್ಲಿಯೇ ಈಜುವರು, ಮುತ್ತು ತಾವಿರುವ ಜಾಗದಲ್ಲಿಯೇ ಹುಡುಕಿ ತೆಗೆವರು. ಕಲ್ಲನ್ನೆ ಮುತ್ತಾಗಿಸುವರು, ಹೀಗೆ ಮೌಲ್ಯವಿಲ್ಲದ್ದಕ್ಕೂ ಹೆಚ್ಚಿನ ಮೌಲ್ಯವನ್ನು ತಂದುಕೊಡುವರು.

*ನೊರೆಗೆರೆದೇಳಲು ಕಡಲಿನ ತೆರೆ ನಗೆ*
*ಮುಗುಳ್ನಗುವುದು ಸಾಗರ ಮೇಲೆ*
*ಶಿಶು ಕರ್ಣದಿ ತೆರೆ ಭಾಷಣ ಗಾನದಿ*
*ಗಾಥೆಯ ರಚಿಪುದು ಚಂಚಲ ತಾನದಿ*
*ತೊಟ್ಟಿಲ ತೂಗುತೆ ತಾಯಿ ಸುಮಾನದಿ*
*ಹಾಡುವ ಜೋಗಳದುಲಿವೋಲೆ*
*ಸಾಗರ ನರ್ತಿಸೆ ಶಿಶುಗಳ ಲೀಲೆಗೆ*
*ನಗೆ ಬೀರುವುದಾಂಬುಧಿ ಮೇಲೆ”*

ಈ ಕಂದನ ನಗುವಿದೆಯಲ್ಲಾ ಕಡಲಿನ ತೆರೆಗಳಾಗೀ ಮತ್ತೆ ಮತ್ತೆ ಬರುತ್ತಿರುತ್ತದೆ. ನಗುವಿಗೆ ಕೊನೆಯೆಂಬುದೇ ಇರುವುದಿಲ್ಲ. ಗಾನವು ಕೂಡ ಅದ್ಭುತ, ತಾನೇ ಇರುವಲ್ಲಿಯೇ ತನಗೆ ಇಷ್ಟ ಬಂದ ಹಾಗೇ ಕಥೆಯನ್ನು ರಚಿಸುತ್ತವೆ. ತೊಟ್ಟಿಲಲ್ಲಿ ತಾಯಿಯ ಲಾಲಿ ಹಾಡನ್ನು ಕೇಳಿದ ಮಗು ಈಗ ತಾನೇ ಲಾಲಿಯನ್ನು ಹಾಡುತ್ತದೆ. ಇದು ಸೋಜಿಗವೇ ಸರಿ. ಇಂತಹ ಕಂದಮ್ಮಗಳ ಲೀಲೆಯನ್ನು ನೋಡಿ

ಸಾಗರವೇ ನರ್ತಿಸುತ್ತದೆ. ನಿಜಕ್ಕೂ ಈ ವರ್ಣನೆ ಮಗುವಿನ ನಗುವಿಗೆ ಸೂಕ್ತವಾಗಿದೆ.

ಈ ಲೋಕದ ಪರಿವಾರದಲ್ಲಿ ಕಂದಮ್ಮಗಳು ಒಂದೆಡೆ ಸೇರಿದರೆ ಅಂಬರವೇ ಖುಷಿಯಿಂದ ಮಳೆಯನ್ನು ಸುರಿಸುತ್ತದೆ. ಇವುಗಳ ಆಟಕ್ಕೆ ನೌಕೆಯೇ ಮುಳುಗುತ್ತದೆ. ಮರಣದೂತರು ಕೂಡ ಎಡ ಬಲದಲ್ಲಿ ಬರುವುದಿಲ್ಲ. ಇಂತಹ ಮುಗ್ಧ ನಗುವಿಗೆ, ಮನಕ್ಕೆ, ಮುಗ್ಧತೆಗೆ ದೇವಾನುದೇವತೆಗಳೇ, ನಿಸರ್ಗ, ಸೋತು ನಿಲ್ಲುತ್ತವೆ ಎಂಬುದನ್ನು ಈ ಕವಿತೆಯ ಮೂಲಕ ತಿಳಿಯಬಹುದಾಗಿದೆ.

**ಕೊನೆಟಿಪ್ಪಣಿಗಳು**

1. ಶೇಷಗಿರಿರಾವ್ ಎಲ್.ಎಸ್. (2008). *ಹೊಸಗನ್ನಡ ಸಾಹಿತ್ಯ ಚರಿತ್ರೆ,* ಅಂಕಿತ ಪುಸ್ತಕ. ಪುಟ 95.
2. ಕುವೆಂಪು. (2024). *ಜೇನಾಗುವ!.* ಉದಯರವಿ ಪ್ರಕಾಶನ. ಪುಟ 29.
3. ಅದೇ. ಪುಟ 37.
4. ಅದೇ. ಪುಟ 38.
5. ಕುವೆಂಪು. (2024). *ಪ್ರೇಮಕಾಶ್ಮೀರ.* ಉದಯರವಿ ಪ್ರಕಾಶನ. ಪುಟ 3.
6. ಕುವೆಂಪು (2024). *ಕುಟೀಚಕ!.* ಉದಯರವಿ ಪ್ರಕಾಶನ. ಪುಟ 57.
7. ಅದೇ. ಪುಟ. 58.